ಅಧ್ಯಕ್ಷರು.—ನಿಯಮ ೩೩ಳಿ ರದ್ದು ಆದ ಕೂಡಲೇ ಪಂಪಾಪತಿಯವರು ಹೇಳಿರುವುದನ್ನೇ ತೆಗೆದುಕೊಳ್ಳೋಣ.

ಶ್ರೀ ಬಿ. ಎಸ್. ಯಡಿಯೂರಪ್ಪ —ಬಗರ್ ಹುಕುಂ ಸಾಗುವಳಿ ಬಗ್ಗೆ ಚರ್ಚೆಯನ್ನು ಮಾಡುವುದಕ್ಕೆ ಉದ್ದೇಶ ಪೂರ್ವಕವಾಗಿ ಅವಕಾಶ ಕೊಡುತ್ತಿಲ್ಲ.

ಅಧ್ಯಕ್ಷರು.—೩೩ ಳರ ವಿಷಯಕ್ಕೆ ಉತ್ತರ ಕೊಡುವುದಕ್ಕೆ ಮಂತ್ರಿಗಳು ಬಂದಿದ್ದಾರೆ. ಅದು ಮುಂಗಿಯಲಿ.

ಶ್ರೀ ಬಿ. ಎಸ್. ಯಡಿಯೂರಪ್ಪ —ಬಗರ್‌ಹುಕುಂ ಸಾಗುವಳಿ ಬಗ್ಗೆ ಮಾತನಾಡುವುದಕ್ಕೆ ತಾವು ಹೇಳಿದ್ದೀರಿ. ಬಗರ್ ಹುಕುಂ ಮಾಡಿರುವ ಬಡವರ ಬಗ್ಗೆ ಸರ್ಕಾರಕ್ಕೆ ಸಹಾನುಭೂತಿ ಇಲ್ಲ ಇದರ ಬಗ್ಗೆ ಸರ್ಕಾರ ಹೊಂದಿರುವ ನೀತಿಯ ಬಗ್ಗೆ ಪ್ರತಿಭಟನೆ ಮಾಡಿ ನಾನು ವಾಕ್ ಔಟ್ ಮಾಡುತ್ತೇನೆ.

(ಶ್ರೀ ಬಿ. ಎಸ್. ಯಡಿಯೂರಪ್ಪನವರು ಸದನದಿಂದ ಸಭಾತ್ಯಾಗ ಮಾಡಿದರು.)

ಶ್ರೀ ಯು. ಭೂಪತಿ.—ಮಾನ್ಯ ಅಧ್ಯಕ್ಷರೇ, ನನಗೆ ಒಂದು ನಿಮಿಷ ಅವಕಾಶ ಕೊಡಿ ಕೊಟ್ಟು ನನ್ನ ಅಪೀಲನ್ನು ತಾವು ದಯಮಾಡಿ ಕೇಳಬೇಕು : ಒಂದೇ ಒಂದು ನಿಮಿಷ ನನಗೆ ಅವಕಾಶ ಕೊಡಿ. ನಿನ್ನೆ ದಿವಸ ತಾವು ಏನು ಹೇಳಿದ್ದೀರಿ ? ನಾಳೆ ದಿವಸ ಎಲ್ಲಾ ವಿಷಯವನ್ನು ಚರ್ಚೆ ಮಾಡೋಣ. ರಾತ್ರಿ ೧೨ ಗಂಟೆ ಆದರೂ ಪರವಾಗಿಲ್ಲ, ೧೩ ಗಂಟೆ ಆದರೂ ಪರವಾಗಿಲ್ಲ ಎಲ್ಲಾ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳೋಣವೆಂದು ಹೇಳಿದ್ರಿ.

ಅಧ್ಯಕ್ಷರು.—ತಾವು ಕೂಡ್ರಿ

ಶ್ರೀ ಯು. ಭೂಪತಿ.—ನಾವು ಪ್ರಿವಿಲೇಜ್ ಮೋಷನ್ ಬಗ್ಗೆ ಚರ್ಚೆ ಮಾಡಬೇಕೆಂದು ತಮಗೆ ಕೇಳಿಕೊಂಡಿದ್ದೆವು.

ಅಧ್ಯಕ್ಷರು.—ತಾವು ಕೂಡ್ರಿ.

(ಗೊಂದಲ)

ಅಧ್ಯಕ್ಷರು.—ನಥಿಂಗ್ ಟುಬಿ ರೆಕಾರ್ಡೆಡ್.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ. —ಈ ಪ್ರಶ್ನೆ ನಿಮ್ಮ ಮತ್ತು ಅವರ ಮಧ್ಯದಲ್ಲಿ ಇದೆ. ಸರ್ಕಾರದ ಪಾತ್ರ ಏನೂ ಇಲ್ಲ

ಅಧ್ಯಕ್ಷರು.—ಅಜೆಂಡಾ ಪ್ರಕಾರ ಈಗ ಹೊರಟಿದ್ದೇನೆ. ಈಗ ನೀವು ಕೂರ್ರಿ. ಮೊದಲು ೩೩ಳಿ, ಅದು ಮುಗಿದ ಮೇಲೆ ನೋಡೋಣ. ನಿಯಮ ೩೩ಳಿ ತುಂಬಾ ಮುಖ್ಯ.

ಶ್ರೀ ಯು. ಭೂಪತಿ.—ನಿಮ್ಮ ಮನಸ್ಸಿಗೆ ಬರದೇ ಇರುವುವುವೆಲ್ಲ. ಅಮುಖ್ಯವೋ ? ಒಳ್ಳೇ ಚೆನ್ನಾಗಿದೆಯಲ್ಲ ನನ್ನ ಭಾಷಣ ಅರ್ಧಕ್ಕೆ ನಿಂತಿದೆ. ಪ್ರಿವಿಲೇಜ್ ಮೋಷನ್ ಮೂವ್ ಆಗಿದ್ದುದು ಏನಾಯಿತು.

(ಗೊಂದಲ)

ಅಧ್ಯಕ್ಷರು.— ತಾವು ಕೂಡ್ರಿ.

(ಗೊಂದಲ)

ಶ್ರೀ ಯು. ಭೂಪತಿ.—ಹೆಗಡೆಯವರನ್ನು ೧೪ನೇ ತಾರೀಖು ಕರೆಸುತ್ತೇವೆಂದು ಹೇಳಿದರಲ್ಲ, ಏನಾಯಿತು ಅದು ? ನನ್ನ ಪ್ರಿವಿಲೇಜ್ ಮೋಷನ್ನಿನ ಚರ್ಚೆ ಏನಾಯಿತು ಎಂಬುದನ್ನು ನೀವು ಹೇಳಬೇಕು.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಇದೆಲ್ಲ ಶುರುವಾದದ್ದು ಅವರ ಚರ್ಚೆಯಲ್ಲಿ. ಅವರು ಐದಾರು ಸೆಂಟೆನ್ಸ್ ಭಾಷಣಾನೂ ಮಾಡಿರಲ್ಲಿಲ್ಲ, ಆಗ ಪಾಯಿಂಟಾಫ್ ಆರ್ಡರ್ ರೈಸ್ ಆಯಿತಲ್ಲ. ಆದ್ದರಿಂದ ಅವರಿಗೆ ನೀವು ಹೇಳಬೇಕು.